ನೀವು ಇನ್ನೊಂದು ಮದುವೆ...'

'ನೀವು ಹೀಗೆಲ್ಲಾ ಮಾತಾಡುತ್ತಿದ್ದರೆ ನಾನು ಈಗ ಹೋಗುವುದೇ ಇಲ್ಲ... ನನಗನ್ನಿಸುತ್ತಿದೆ... ಈಗ ನಾನು ಈ ಬಾಗಿಲಿನಿಂದ ಹೊರಹೋದರೆ, ನಿಮ್ಮ ಬದುಕಿನಿಂದ ಕೂಡ ಹೊರಹೋದಂತೆ ಆಗಿ ಬಿಡುತ್ತದೆ ಎಂದು ಕಂಗಳಲ್ಲಿ ನೋವು... ನೋಡಲಾರೆ.'

'ಛೇ... ನಾನು ಬದುಕಿರುವವರೆಗೂ ಯು ವಿಲ್ ಬಿ ದ ಮೋಸ್ಟ್ ಡಿಯರ್ ಪರ್ಸನ್ ಟು ಮಿ ಜೊತೆಯಲ್ಲಿ ಇರಲಿ... ಇಲ್ಲದಿರಲಿ... ಇಟ್ ಡಸ್ ನಾಟ್ ಮ್ಯಾಟರ್. ಕಳೆದ ಮೂರು ದಿನಗಳಂತೂ ನನ್ನ ಜೀವನದ ಅತ್ಯಂತ ಸಂತಸದ ಮೂರು ದಿನಗಳು'..

ಮಾತಾಡುತ್ತಾ ಆಡುತ್ತಾ ನನ್ನ ದನಿ ನಡುಗಿತು. ಗದ್ಗದಿತವಾಯಿತು...

ವಿಶ್ವಾಸ್ ಬಳಿ ಬಂದು ನನ್ನ ತಬ್ಬಿ ಹಿಡಿದ. ನನ್ನ ತೋಳುಗಳು ಅವನನ್ನು ಬಳಸಿದವು... ಕಾಲ ಈ ಘಳಿಗೆಯಲ್ಲೇ ಸ್ತಬ್ಧವಾಗಿ ನಿಂತುಬಿಡಬಾರದೇ?... ಕಾಲ ನಿಲ್ಲುವುದೇ?

* * * *

(ಸಶೇಷ)

## ಡಾ.ಜಿ. ಕೃಷ್ಣಪ್ಪ ಅವರ

## ಹೊಸ ಧಾರಾವಾಹಿ ಶೀಘ್ರ ಆರಂಭ






ಅಯೋಧ್ಯಾ ನಗರಿಯ ಅರಸನಾದ ದೊರೆ ನಿಷಧ ಮಹಾರಾಜನ ಸುಪುತ್ರ ನಳ ಭೀಮ ಮಹಾರಾಜನ ಸುಪುತ್ರಿ ದಮಯಂತಿಯನ್ನು ವಿವಾಹವಾಗ ಬಯಸಿದ. ನಳ ತನ್ನ ಪ್ರತಿನಿಧಿಯ ರೂಪದಲ್ಲಿ ಹಂಸವನ್ನು ದಮಯಂತಿಯೆಡೆಗೆ ಕಳುಹಿಸಿಕೊಟ್ಟ. ಹಂಸ ದಮಯಂತಿಯ ಅರಮನೆಗೆ ಹಾರಿ ಹೋಯಿತು. ದಮಯಂತಿ ಉದ್ಯಾನವನದಲ್ಲಿ ಏಕಾಂತಳಾಗಿರುವುದನ್ನು ಕಂಡು ನಳನ ಸ್ತುತಿಪೂರ್ವಕವಾದ ಗೀತೆಗಳನ್ನು ಹಂಸ ಹಾಡತೊಡಗಿತು.

ಅದೇ ವೇಳೆಗೆ, ಭೀಮ ತನ್ನ ಪುತ್ರಿ ದಮಯಂತಿಯ ವಿವಾಹಕ್ಕಾಗಿ ಸ್ವಯಂವರವನ್ನು ಏರ್ಪಡಿಸಿದ. ಇದರಲ್ಲಿ ದಮಯಂತಿಯು ನಳನನ್ನು ಮದುವೆಯಾಗುವುದಾಗಿ ಆಯ್ಕೆ ಮಾಡಿಕೊಂಡಳು. ನಳ ದಮಯಂತಿಯರ ವಿವಾಹ ಮಹೋತ್ಸವ ನೆರವೇರಿತು.

ಇವರಿಬ್ಬರ ಹಾಲು ಜೇನಿನಂತಹ ಸಂಸಾರದ ಪ್ರಣಯ ಪ್ರಸಂಗಗಳ ಕುತೂಹಲಕರ ಪ್ರೇಮ ಕಥಾನಕ ಅತ್ಯದ್ಭುತ ವರ್ಣನೆಗಳೊಂದಿಗೆ...